**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1347

ಸದಸ್ಯರ ಹೆಸರು : ಡಾ|| ತಳವಾರ್ ಸಾಬಣ್ಣ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 19-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಳಗಾವಿಯಲ್ಲಿ ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಿ 3 ವರ್ಷಗಳಾದರು ಇನ್ನು ಸಾರ್ವಜನಿಕರಿಗೆ ಲಭ್ಯವಾಗದಿರಲು ಕಾರಣಗಳೇನು; | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯ ಬೆಳಗಾವಿ ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಾಣ ಸಂಬಂಧ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರದೊಂದಿಗೆ 2.07 ಎಕರೆ ಜಾಗವನ್ನು Smart City ಇವರಿಗೆ ಹಸ್ತಾಂತರಿಸಲಾಗಿದ್ದು, ಸದರಿ ಜಾಗದಲ್ಲಿ 0.87 ಎಕರೆ Defence Estateಗೆ ಒಳಪಟ್ಟಿರುತ್ತದೆ ಎಂದು ತಿಳಿದುಬಂದಿದ್ದರ ಹಿನ್ನಲೆಯಲ್ಲಿ ಸದರಿ ಜಾಗವನ್ನೂ ಸಹ ದಿನಾಂಕ:23.02.2021 ರಂದು ಹಸ್ತಾಂತರ ಮಾಡಲಾಗಿದೆ.<br><br>ನಂತರ, ಸದರಿ ಜಾಗದ ಬೌಂಡರಿ Boundary Demarcation ಅನ್ನು ದಿನಾಂಕ:05.10.2023 ರಂದು ಹೆಚ್ಚುವರಿ ಜಾಗದೊಂದಿಗೆ ನೀಡಲಾಗಿದೆ. Boundary Demarcation, Architectural Drawings ಹಾಗೂ ಹೆಚ್ಚುವರಿ ಜಾಗದ ಲಭ್ಯತೆ ವಿಳಂಬವಾಗಿದ್ದರಿಂದ ಹಾಗೂ ಪ್ರಮಾಣಗಳ ವ್ಯತ್ಯಾಸ (Variation)ದಿಂದ ಕೆಲಸಗಳ ಅನುಷ್ಠಾನಕ್ಕಾಗಿ ಸಮಯ ವ್ಯಯವಾಗಿರುತ್ತದೆ. |
| ಆ. | ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಈಗ ಯಾವ ಹಂತದಲ್ಲಿದೆ; | ಬಸ್ ನಿಲ್ದಾಣ ಕಾಮಗಾರಿಯು ಶೇಕಡಾ 95% ರಷ್ಟು ಪೂರ್ಣಗೊಂಡಿದ್ದು, ಮುಂದಿನ ಒಂದು ತಿಂಗಳ ಒಳಗಾಗಿ ಸಂಪೂರ್ಣವಾಗಿ Smart City Belagavi ಇವರ ವತಿಯಿಂದ ಕಾರ್ಯಗತಗೊಳಿಸಲಾಗುವುದು.<br>ಮುಂದುವರೆದು, Smart City Belagavi ಇವರೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |
| ಇ. | ಬೆಳಗಾವಿ ನಗರ ಉತ್ತರ ಕರ್ನಾಟಕದ ಬಹುಮುಖ್ಯ ಹಾಗೂ ದೊಡ್ಡ ನಗರವಾಗಿದ್ದು, ಕಾಮಗಾರಿಗಳನ್ನು ತಕ್ಷಣವೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ? | |

ಸಂಖ್ಯೆ: ಟಿಡಿ 78 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು